*ಅಶ್ವಿನಿ ವಿ. ಹೆಗಡೆ, ಭೈರುಂಬೆ*
*ನಾರಿ ಮುನಿದರೆ ಮಾರಿ; ಗಂಡು ಮುನಿದರೆ?*



ಪರಾರಿ!

*ನಾಗಲಕ್ಷ್ಮಿ ರಾಘವೇಂದ್ರ, ಬೆಂಗಳೂರು*
*ಸಕಲ ಜೀವಿಗಳೂ ಚಿರಾಯುಗಳಾಗಿಬಿಟ್ಟರೆ ಏನಾಗಬಹುದು ಅಣ್ಣಯ್ಯಾ?*
ಕೋಳಿಯನ್ನು ಸಹ ಕೊಲ್ಲಲಾಗದೆ, ಎಲ್ಲಾ ನಾನ್-ವೆಜ್ ಹೊಟೆಲ್‌ಗಳು ಬಂದ್ ಆಗಬಹುದು!

*ಕೆ.ಎಸ್. ಸುರಭಿ, ದೊಡ್ಡಬಳ್ಳಾಪುರ*
*ಆಪ್ರೇಶನ್ ಕಮಲ, ಆಪ್ರೇಶನ್ ಹಸ್ತ, ಯಾವ ದೊಡ್ರೋಗ ವಾಸಿ ಮಾಡ್ಲಿಕ್ಕೆ ಬುದ್ಧಿ?*
ಇಬ್ಬರದ್ದೂ ಕಾಲ್ಸೆಳ್ತದ್ ರೋಗ ವಾಸಿ ಮಾಡ್ಲಿಕ್ಕೆ ಕಣ್ ಮಗಾ!

*ಪಿ.ಜೆ. ರಾಘವೇಂದ್ರ, ಮೈಸೂರು*
*ತೀರ್ಥಯಾತ್ರೆಗೆ ಹೊರಡುವ ವಯಸ್ಸಿನಲ್ಲಿ ಪಾದಯಾತ್ರೆ ಹಮ್ಮಿಕೊಂಡಿದ್ದಾರಲ್ಲಾ, ಯಾಕೆ?*
ಚಿಂತೆಯಿಲ್ಲ; ಪಾದಯಾತ್ರೆಯ ಜೊತೆಜೊತೆಗೇ ತೀರ್ಥಯಾತ್ರೆಯೂ ಆಗುತ್ತಿದೆಯಂತೆ!

*ಎನ್. ವಸಂತ, ಕತ್ತರಿಗುಪ್ಪೆ*
*ತಮ್ಮ ಅಂಕಣದಲ್ಲಿ ನಿಷ್ಠುರ ಪ್ರಶ್ನೆಗಳು ಕ.ಬು.ಗೆ ಸೇರುವುದು ಗ್ಯಾರಂಟಿ ಅಂತಾರಲ್ಲಾ...?*



ನಿಜ. ಆದರೆ ಉತ್ತರ ನೀಡಿದ ನಂತರ!

*ಎಂ.ಎಸ್.ಧರ್ಮೇಂದ್ರ, ಬೆಂಗಳೂರು*
*ಹೆಣ್ಣಿಗೆ ಮೌನವೇ ಆಭರಣ, ಆದರೆ ಇವರು ಅದಕ್ಕೆ ತದ್ವಿರುದ್ಧ..?*
ನಿರಾಭರಣ ಸುಂದರಿಯರು ಎನ್ನಿಸಿಕೊಳ್ಳುವ ಆಸೆಯಂತೆ!

*ಹಾಡ್ಯ ಜಯಾನಂದ, ಮೈಸೂರು*
*ಹಿಂದಿನ ದಂಡಿ ಯಾತ್ರೆಗೂ, ಈಗಿನ ಪಾದಯಾತ್ರೆಗೂ ಏನು ವ್ಯತ್ಯಾಸ?*
ದಂಡಿಯದು ಬ್ರಿಟಿಷರ ದಂಡನೆಗೆ, ಇದರ ಫಲ ಕೇವಲ ಒಂದು ದಂಡಿಗೆ!

*ಸರ್ದಾರ್ ಎಂ, ಅರಸೀಕೆರೆ*
*ಚಳಿಗಾಲ, ಬೇಸಿಗೆ ಕಾಲ, ಮಳೆಗಾಲ, ಮುಂದೆ...?*
ಚುನಾವಣಾ ಕಾಲ, ಕೊಳ್ಳೆಗಾಲ!

*ಕೆ.ಎಸ್. ನಾರಾಯಣರೆಡ್ಡಿ, ಕೆ.ಜಿ.ಎಫ್.*
*ರಾಜಕಾರಣಿಗಳ ಭಾಷಣಕ್ಕೆ ಜನ ಹುಚ್ಚೆದ್ದು ಕುಣಿಯುವರಲ್ಲಾ, ಕಾರಣವೇನು?*
ಅದು ಭಾಷಣಕ್ಕಲ್ಲ, ನಂತರದ ಬಾಡೂಟಕ್ಕೆ!

*ಡಿ.ಆರ್. ಮಂಜುನಾಥ್, ದೇಬೂರು*
*ಪ್ರೇಮಿಗಳು ಕಣ್ಣಿಂದ ಬಾಣ ಬಿಡುತ್ತಾರೋ, ಹೃದಯದಿಂದ ಬಾಣ ಬಿಡುತ್ತಾರೋ?*
ಕಣ್ಣಿಂದ ಬಾಣ ಬಿಡುತ್ತಾರೆ, ಹೃದಯದಿಂದ ಪ್ರಾಣ ಬಿಡುತ್ತಾರೆ!

*ರವೀಂದ್ರನಾಥ ಶಿ. ಯಡಹಳ್ಳಿ, ಇಲಕಲ್ಲ*
*ಗುರು, ದೇವದಾಸನಿಗೂ, ದೇವಿದಾಸನಿಗೂ ಇರುವ ವ್ಯತ್ಯಾಸವೇನು?*
ದೇವದಾಸನಿಗೆ ಕುಡಿಯಲು ಸ್ವಾತಂತ್ರ್ಯವಿತ್ತು!

*ಎ.ಎಸ್. ಸ್ವಾಮಿ, ಶೋರಾಪೂರ*
*ನಮ್ಮ ಏಳ್ಗೆಗೆ ನಾವೇ ಶಿಲ್ಪಿಗಳಾಗಬೇಕಂತೆ?*
ಶಿಲ್ಪಿಗಳಷ್ಟೇ ಅಲ್ಲ, ಕೊಂಬು, ಕಹಳೆ, ಜಾಗಟೆ, ಶಂಖ ಎಲ್ಲವೂ ಆಗಬೇಕು!

*ಗಾಯತ್ರಿ, ರಾಜಾಜಿನಗರ*
*ಹೆಣ್ಣು, ಹೊನ್ನು, ಮಣ್ಣು, ಇವುಗಳ ಹಿಂದೆ ಹೋದವರ ಗತಿ...?*
ಕಾಂಗ್ರೆಸ್, ಜ್ಯೂಯಲರಿ ಮಾರ್ಟ್, ಜೆಡಿಎಸ್ ಸೇರುತ್ತಾರೆ!

*ಕುಬೇರಪ್ಪ ಎಂ. ವಿಭೂತಿ, ಹರಿಹರ*
*ಮನುಷ್ಯ ಜನ್ಮವನ್ನು ಪೂರ್ಣಫಲ ಎನ್ನಲು ಸಾಧ್ಯವೆ?*
ಊಹೂಂ! ಕಾಯಿ ಮಾಗಿದರೆ ಫಲ, ಕಾಯ ಮಾಗಿದರೆ ನಿಷ್ಫಲ!

*ಮಲ್ಲಿಕಾರ್ಜುನ ಗಚ್ಚಿ, ಗೋಗಿ*
*ಸಮಾನತೆಯನ್ನು ಅನುಸರಿಸದವರು ಸಮಾನತೆಯನ್ನು ನಿರೀಕ್ಷಿಸುವುದು ಸರಿಯೆ?*
ಅಡಿಗೆಯನ್ನೇ ಮಾಡದವರು ಊಟ ಬೇಕೆನ್ನಲು ಹಕ್ಕಿಲ್ಲವೇ? ಆಚರಣೆಯೇ ಬೇರೆ, ನಿರೀಕ್ಷೆಯೇ ಬೇರೆ!

*ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ*
*ಸಿನಿಮಾ ನಟ-ನಟಿಯರನ್ನು ದೈವದಂತೆ ಆರಾಧಿಸುವುದು ಎಷ್ಟರಮಟ್ಟಿಗೆ ಸರಿ?*
ದೇವರ ಪಾತ್ರ ಹಾಕಿದ್ದಾಗ ಭಕ್ತರ ಪಾತ್ರದವರು ಆರಾಧಿಸುವಷ್ಟು ಮಟ್ಟಿಗೆ ಸರಿ!

## ಬಹುಮಾನಿತ ಪ್ರಶ್ನೆ

*ಎಚ್.ಆರ್. ಕಡಿವಾಲ, ಬಾದಾಮಿ*
*ಈಗಿನ ಹುಡುಗಿಯರು ಎತ್ತರದ ಚಪ್ಪಲಿ, ಅರ್ಧಂಬರ್ಧ ಉಡುಗೆ ಧರಿಸುವುದೇಕೆ?*
ಭೂಮಿಯ ಕಾವೇರುತ್ತಿದೆಯಲ್ಲಾ, ಸೆಖೆ ಜಾಸ್ತಿಯಂತೆ!

*ಬಾ.ರಂ. ಸುರೇಶ್, ಶಿವಮೊಗ್ಗ*
*ನನ್ನ ಭವಿಷ್ಯದಲ್ಲಿ 3 ಹೆಂಡಂದಿರಿಂದ ಜೀವನ ಪೂರ್ಣ ಸುಖವಿದೆ ಎಂದಿದೆಯಲ್ಲಾ, ನಿಜವಾದರೆ ಗತಿ?*
ನಿಜವಾಗುತ್ತದೆ; ನಿಮ್ಮಪ್ಪನ, ನಿಮ್ಮ, ನಿಮ್ಮ ಅಳಿಯನ ಹೆಂಡತಿಯರಿಂದ ಜೀವನವೇ ಸೊಗಸು!

*ಸಾವಿತ್ರಮ್ಮ ಕೆ. ವಿಭೂತಿ, ಹರಿಹರ*
*ಜನರು ನಮ್ಮ ಬೆನ್ನ ಹಿಂದೆ ಮಾತನಾಡಿದರೆ ಏನರ್ಥ?*
ಹಸಿರು ಸಿಗ್ನಲ್ ಬಿದ್ದಿದ್ದರೂ ಚಲಿಸದಿದ್ದುದಕ್ಕೆ ಬೈಯುತ್ತಿದ್ದಾರೆಂದು!

*ನರಸಿಂಹ ಪೈ, ಹೊನ್ನಾವರ*
*ಸಚಿವ ಶ್ರೀರಾಮುಲು ತಲೆ ಬೋಳಿಸಿಕೊಂಡದ್ದೇಕೆ...?*



ಕೂದಲು ವಾಸ್ತು ಪ್ರಕಾರ ಕೂಡುತ್ತಿರಲಿಲ್ಲವಂತೆ!

*ವಿ.ಹೇಮಂತಕುಮಾರ್, ಬೆಂಗಳೂರು*
*ಮನುಷ್ಯರ ಬಟ್ಟೆ ನೋಡಿ ಅಂತಸ್ತು ಅಳೆಯಬಹುದೇ?*
ಬಟ್ಟೆಯ ಯೋಗ್ಯತೆ ಅಳೆಯಬಹುದು.

*ಎಂ.ಎಸ್.ಗುರುರಾಜಾಚಾರು, ಬಳ್ಳಾರಿ*
*ನಟನಟಿಯರ ಜೀವನ ಸಿನಿಮಾದಲ್ಲಿ ಸಿಹಿ, ನಿಜಜೀವನದಲ್ಲಿ ಕಹಿ. ಏಕೆ ಹೀಗೆ?*
ನಿಜಜೀವನದಲ್ಲಿ ಸರಿಯಾದ ನಿರ್ದೇಶಕ ದೊರಕದಿರುವುದರಿಂದ!

*ಮಹಾವೀರ ಕಾಸಾರ, ಚನ್ನಗಿರಿ*
*ಬೇರೆಯವರ ಪ್ರಶ್ನೆಯನ್ನು ತಿರುಚಿ ಕೇಳಿದವರಿಗೆ ಬಹುಮಾನ ಕೊಡುವುದು ನ್ಯಾಯವೇ?*
ಬೇರೆಯವರು ಪ್ರಶ್ನಿಸಿದ ರೀತಿ ಸರಿಯಿದ್ದುದಕ್ಕೆ ಈ ರೀತಿಯ ಮತ್ಸರ ತರವೇ?

■ ರಾಮ್